# ಇನ್‌ಸ್ಪೈರ್ ಮಾನಕ್ ಮೆಂಟರಿಂಗ್ ಕಾರ್ಯಾಗಾರ

**ಸಂ.ಕ.ಸಮಾಚಾರ, ಮಂಗಳೂರು**

ಎನ್‌ಐಟಿಕೆ ಸುರತ್ಕಲ್ ಮತ್ತು ನ್ಯಾಷನಲ್ ಇನ್ನೋವೇಶನ್ ಫೌಂಡೇಶನ್ ಸಹಯೋಗದೊಂದಿಗೆ 2 ದಿನಗಳ ಕ್ರಿಯಾತ್ಮಕ 'ಇನ್‌ಸ್ಪೈರ್ ಮಾನಕ್' ಮೆಂಟರಿಂಗ್ ಕಾರ್ಯಾಗಾರ ಎನ್‌ಐಟಿಕೆ ಸುರತ್ಕಲ್‌ನ ಡಿಜಿಟಲ್ ಲೈಬ್ರರಿ ಸೆಂಟರ್‌ನಲ್ಲಿ ನಡೆಯಿತು.

ಸರ್ಕಾರದ ದೃಷ್ಟಿಕೋನಕ್ಕೆ ಅನುಗುಣವಾಗಿ ಈ ಉಪಕ್ರಮವು 6ರಿಂದ 11ನೇ ತರಗತಿಯ ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು ಬೆಳಗಿಸುವ ಮತ್ತು ನವೀನ ಆಲೋಚನೆಗಳನ್ನು ಪೋಷಿಸುವ ಗುರಿಯನ್ನು ಹೊಂದಿದೆ.

ಇನ್‌ಸ್ಪೈರ್ ಮಾನಕ್ ರಾಷ್ಟ್ರವ್ಯಾಪಿ ನಾವೀನ್ಯತೆಯನ್ನು ಉತ್ತೇಜಿಸುವ ಪ್ರಮುಖ ಕಾರ್ಯಕ್ರಮವಾಗಿದೆ. ಸುಮಾರು 40 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಭಾಗವಹಿಸಲು ಆಯ್ಕೆ ಮಾಡಲಾಯಿತು. ಈ ವಿದ್ಯಾರ್ಥಿಗಳು ತಮ್ಮ ನವೀನ ಆಲೋಚನೆಗಳನ್ನು ನವದೆಹಲಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶಿಸಲಿದ್ದಾರೆ.

ಡಿಎಸ್‌ಇಆರ್‌ಟಿ ಬೆಂಗಳೂರಿನ ಸಹಾಯಕ ನಿರ್ದೇಶಕಿ ವಾಣಿ ಆರ್.ಕೆ., ಎನ್‌ಐಎಫ್‌ನ ಹಿರಿಯ ಯೋಜನಾ ಸಹಾಯಕ ಡಾ.ವಿರೆಲ್ ಅತಿಥಿಗಳಾಗಿ ಭಾಗವಹಿಸಿದ್ದರು. ಪ್ರಭಾರ ನಿರ್ದೇಶಕ ಮತ್ತು ಡೀನ್ ಪ್ರೊ.ಉದಯ್ ಭಟ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಎನ್‌ಐಟಿಕೆಯ ಪ್ರೊ.ಅರುಣ್ ಎಂ. ಇಸ್ಲೂರು, ಎನ್‌ಐಎಫ್‌ನ ಕಾರ್ಯಕ್ರಮ ಸಂಯೋಜಕಿ ಡಾ.ಮಹಿಮಾ ಕೆ., ವಿದ್ಯಾರ್ಥಿ ಕಲ್ಯಾಣ ಡೀನ್ ಪ್ರೊ.ಎ.ಸಿ.ಹೆಗ್ಡೆ, ಎನ್‌ಐಟಿಕೆ ಬೋಧಕವರ್ಗ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



Samyuktha Karnataka, Date:13/07/24, p, 02